# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎಲ್.ಶ್ರೀಕಂಠಯ್ಯ, ಅಂದಿನ ಪ್ರಭಾರಿ ಕಾರ್ಯಪಾಲಕ ಇಂಜನಿಯರ್, ಪಂ.ರಾ.ಇಂ.ವಿಭಾಗ, ಮಡಿಕೇರಿ ಹಾಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಮಡಿಕೇರಿ ಹಾಗೂ ಶ್ರೀ ಶ್ರೀಧರಮೂರ್ತಿ, ಲೆಕ್ಕಾಧಿಕ್ಷಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಡಿಕೇರಿ ರವರುಗಳ ವಿರುದ್ಧದ ಆರೋಪಗಳ ಕುರಿತಂತೆ-ಅಂತಿಮ ಆದೇಶ

**ಓದಲಾಗಿದೆ:**
1) ಮುಖ್ಯ ಕಾರ್ಯನಿರ್ವಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಡಗು ಇವರ ಪತ್ರ ಸಂಖ್ಯೆ:ಕೊಜಿಪಂ:ಆಡಳಿತಸೇವೆ-6:04:2019-20/1069, ದಿನಾಂಕ:09..10.2019
2) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 50 ಇಎನ್‌ಕ್ಯೂ2019, ದಿನಾಂಕ:07.11.2019
3) ಮಾನ್ಯ ಕೆಎಟಿಯು ಮಧ್ಯಂತರ ಆದೇಶ ದಿನಾಂಕ:11.11.2019 ಮತ್ತು 12.11.2019
4) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 50 ಇಎನ್‌ಕ್ಯೂ 2019, ದಿನಾಂಕ:07.12.2019
5) ಮುಖ್ಯ ಕಾರ್ಯನಿರ್ವಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಡಗು ಇವರ ಪತ್ರ ಸಂಖ್ಯೆ:ಕೊಜಿಪಂ:ಆಡಳಿತಸೇವೆ-6:04:2019-20, ದಿನಾಂಕ:21.05.2020

**ಪ್ರಸ್ತಾವನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಡಗು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ದಿನಾಂಕ: 09.10.2019 ರ ಪತ್ರದಲ್ಲಿ 2018-19ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಪ್ರಕೃತಿ ವಿಕೋಪ ಉಂಟಾದ ಕಾರಣ, ಜಿಲ್ಲೆಯಲ್ಲಿ ಕುಡಿಯುವ ನೀರು ಹಾಗೂ ರಸ್ತೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ಬಿಡುಗಡೆಯಾದ ಅನುದಾನ ರೂ.28.00 ಕೋಟಿಗಳ ಪೈಕಿ ರೂ.21.00 ಕೋಟಿಗಳನ್ನು ಶ್ರೀ ಎಲ್.ಶ್ರೀಕಂಠಯ್ಯ, ಕಾರ್ಯಪಾಲಕ ಇಂಜನಿಯರ್(ಪ್ರಭಾರ) ಹಾಗೂ ಶ್ರೀ ಶ್ರೀಧರಮೂರ್ತಿ, ಲೆಕ್ಕಾಧಿಕ್ಷಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಡಗು ಇವರುಗಳು ಖಾಸಗಿ ಬ್ಯಾಂಕ್ ಆದ ಮಹೇಂದ್ರ ಕೊಟಕ್ ಬ್ಯಾಂಕ್ ಲಿಮಿಟೆಡ್ ಇಲ್ಲಿ ದಿನಾಂಕ:14.03.2019ರಂದು ಉಳಿತಾಯ ಖಾತೆ ತೆರದು(ಉಳಿತಾಯ ಖಾತೆ ಸಂಖ್ಯೆ:3812905112) ಆಡಳಿತ ಇಲಾಖೆಯ ಅನುಮೋದನೆ ಪಡೆಯದೆ ಜಮೆ ಮಾಡುವುದರ ಮೂಲಕ ಆರ್ಥಿಕ ಇಲಾಖೆಯ ದಿನಾಂಕ:30.01.2017ರ ಆದೇಶವನ್ನು ಉಲ್ಲಂಘಿಸಿರುತ್ತಾರೆಂದು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ಸರ್ಕಾರವು ಸದರಿ ವರದಿಯನ್ನು ಪರಿಶೀಲಿಸಿ, ಶ್ರೀ ಎಲ್.ಶ್ರೀಕಂಠಯ್ಯ, ಕಾರ್ಯಪಾಲಕ ಇಂಜನಿಯರ್(ಪ್ರಭಾರ) ಹಾಗೂ ಶ್ರೀ ಶ್ರೀಧರಮೂರ್ತಿ, ಲೆಕ್ಕಾಧಿಕ್ಷಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಡಗು ಇವರುಗಳು ಜಿಲ್ಲಾಧಿಕಾರಿಯವರ ಮುಖಾಂತರ ಬಿಡುಗಡೆಯಾದ

ಅನುದಾನವನ್ನು ಆರ್ಥಿಕ ಇಲಾಖೆಯ ದಿನಾಂಕ:30.01.2017ರ ಆದೇಶದಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಬೃಹತ್ ಮೊತ್ತ 21 ಕೋಟಿ ರೂ.ಗಳನ್ನು ಖಾಸಗಿ ಬ್ಯಾಂಕ್ ಆದ ಮಹೇಂದ್ರ ಕೋಟಕ್ ಬ್ಯಾಂಕ್ ನಲ್ಲಿ ಹೊಸದಾಗಿ ಉಳಿತಾಯ ಖಾತೆ ತೆರೆದು ಠೇವಣಿ ಇರಿಸುವ ಮೂಲಕ ಗಂಭೀರ ಸ್ವರೂಪದ ಕರ್ತವ್ಯಲೋಪ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ರುಜುವಾತಾವಾಗಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಸರ್ಕಾರದ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಶ್ರೀ ಎಲ್.ಶ್ರೀಕಂಠಯ್ಯ, ಕಾರ್ಯಪಾಲಕ ಇಂಜನಿಯರ್(ಪ್ರಭಾರ) ಹಾಗೂ ಶ್ರೀ ಶ್ರೀಧರಮೂರ್ತಿ, ಲೆಕ್ಕಾಧಿಕ್ಷಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಡಗು ಇವರುಗಳು ಅಮಾನತ್ತು ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಕ್ರಮವಾಗಿ ಅ.ಸಂ.6457/2019 ಮತ್ತು 6473/2019ವನ್ನು ದಾಖಲಿಸಿರುತ್ತಾರೆ. ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ ಮಾನ್ಯ ಕೆಎಟಿಯು ದಿನಾಂಕ:11.11.2019 ಮತ್ತು 12.11.2019ರಂದು ನೀಡಿರುವ ಮಧ್ಯಂತರ ಆದೇಶದನ್ವಯ ಮಾನ್ಯ ಕೆಎಟಿಯ ಅಂತಿಮ ಆದೇಶಕ್ಕೆ ಒಳಪಟ್ಟು ಸದರಿಯವರುಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಸರ್ಕಾರದ ಆದೇಶದಲ್ಲಿ ಸೇವೆಯಲ್ಲಿ ಮುಂದುವರೆಸಿ ಆದೇಶಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಡಗು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(5) ದಿನಾಂಕ:21.05.2020ರ ಪತ್ರದ ಜೊತೆ ಕಳುಹಿಸಿರುವ ತಪಾಸಣಾ ವರದಿಯಲ್ಲಿ ಸದರಿ ಪ್ರಕರಣದಲ್ಲಿ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲವೆಂದು, ಬಿಡುಗಡೆಯಾದ ಅನುದಾನವನ್ನು ಆಯಾ ಕಾಮಗಾರಿಗಳಿಗೆ ಬಳಕೆ ಮಾಡಲಾಗಿದೆಯೆಂದು, ಈಗಾಗಲೇ ಅನುಷ್ಠಾನಗೊಂಡಿರುವ ಕಾಮಗಾರಿಗಳನ್ನು ಮೂರನೇ ವ್ಯಕ್ತಿಗಳು ತಪಾಸಣೆ ನಡೆಸಿ ಗುಣಮಟ್ಟದ ಬಗ್ಗೆ ಸಲ್ಲಿಸಿರುವ ವರದಿ ಹಾಗೂ ಛಾಯಾಚಿತ್ರಗಳನ್ನು ಪರಿಗಣಿಸಿ ಜಿಲ್ಲಾಧಿಕಾರಿಯವರು ಕಾಮಗಾರಿಗಳಿಗೆ ಬಾಕಿ ಉಳಿಸಿಕೊಂಡಿದ್ದ ಶೇ.25ರಷ್ಟು ಮೊತ್ತವನ್ನು ಬಿಡುಗಡೆ ಮಾಡಿರುವುದರಿಂದ ಕಾಮಗಾರಿಗಳು ಉತ್ತಮ ಗುಣಮಟ್ಟದಲ್ಲಿ ಅನುಷ್ಠಾನಗೊಂಡಿರುತ್ತವೆಂದು ತಿಳಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಡಿಕೇರಿ ರವರು 06 ಜನ ಅಧಿಕಾರಿಗಳ ತನಿಖಾ ತಂಡವನ್ನು ರಚಿಸಿ ವರದಿ ಪಡೆದಿದ್ದು, ಸದರಿ ತನಿಖಾ ತಂಡವು ತನಿಖೆ ಕೈಗೊಂಡು ಸಲ್ಲಿಸಿರುವ ವರದಿಯಲ್ಲಿ ಬಿಡುಗಡೆಯಾದ ಮೊತ್ತವನ್ನು ಪ್ರಕೃತಿ ವಿಕೋಪದಡಿ ಕೆಲಸ ತೆಗೆದುಕೊಂಡಿರುವ ಕ್ರಿಯಾ ಯೋಜನೆಯ ಪ್ರಕಾರವೇ ಅನುಷ್ಠಾನಗೊಳಿಸಿ ನಿಯಮಾನುಸಾರ ಹಣ ವ್ಯಯ ಮಾಡಲಾಗಿರುತ್ತದೆಂದು, ಪ್ರತಿಯೊಂದು ಕಾಮಗಾರಿಯನ್ನು ನಿಯಮಾನುಸಾರ 3ನೇ ಪಾರ್ಟಿಯ ತಪಾಸಣೆ ಮಾಡಿ ಅವರಿಂದ ಕಾಮಗಾರಿ ಗುಣಮಟ್ಟದಲ್ಲಿ ಅನುಷ್ಠಾನಗೊಂಡಿರುವ ಬಗ್ಗೆ ವರದಿ ಬಂದ ನಂತರ ಸಂಬಂಧಪಟ್ಟವರಿಗೆ ಬಿಲ್ಲನ್ನು ನಿಯಮಾನುಸಾರ ಪಾವತಿ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಆಪಾದಿತರುಗಳು ಜಿಲ್ಲಾಧಿಕಾರಿಯಗಳ ಸೂಚನೆಯ ಅನುಸಾರ ಪ್ರಕೃತಿ ವಿಕೋಪ ಯೋಜನೆಯಡಿ ಬಿಡುಗಡೆಯಾದ ಮೊತ್ತವನ್ನು ಪ್ರತ್ಯೇಕವಾಗಿ ಇರಿಸುವ ದೃಷ್ಟಿಯಿಂದ ಬ್ಯಾಂಕನಲ್ಲಿ ಹೊಸದಾಗಿ ಖಾತೆ ತೆರೆಯುವ ಪೂರ್ವದಲ್ಲಿ ಮೇಲಾಧಿಕಾರಿಗಳ ಅನುಮೋದನೆ ಪಡೆದುಕೊಳ್ಳದೇ ಇರುವುದು ಮಾತ್ರ ಅವರ ಕರ್ತವ್ಯಲೋಪವಾಗಿರುತ್ತದೆ. ಸದರಿ ಪ್ರಕರಣದಲ್ಲಿ ಯಾವುದೇ ಹಣ ದುರುಪಯೋಗವಾಗದಿರುವುದರಿಂದ ಇನ್ನು ಮುಂದೆ ಇಂತಹ ಲೋಪಗಳಿಗೆ ಅವಕಾಶ ನೀಡದಂತೆ ಕಾರ್ಯನಿರ್ವಹಿಸಲು ಆಡಳಿತಾತ್ಮಕ

ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 50ಇಎನ್ ಕ್ಯೂ 2018**
**ಬೆಂಗಳೂರು ದಿನಾಂಕ:20.06.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು 2018-19ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಪ್ರಕೃತಿ ವಿಕೋಪ ಉಂಟಾದ ಕಾರಣ, ಜಿಲ್ಲೆಯಲ್ಲಿ ಕುಡಿಯುವ ನೀರು ಹಾಗೂ ರಸ್ತೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದಿಂದ ಬಿಡುಗಡೆಯಾದ ಅನುದಾನ ರೂ.28.00 ಕೋಟಿಗಳ ಪೈಕಿ ರೂ.21.00 ಕೋಟಿಗಳನ್ನು ಜಿಲ್ಲಾಧಿಕಾರಿಯವರ ಸೂಚನೆಯ ಅನುಸಾರ ಪ್ರಕೃತಿ ವಿಕೋಪ ಯೋಜನೆಯಡಿ ಬಿಡುಗಡೆಯಾದ ಮೊತ್ತವನ್ನು ಪ್ರತ್ಯೇಕವಾಗಿ ವಿವರ ಇರಿಸುವ ದೃಷ್ಟಿಯಿಂದ ಬ್ಯಾಂಕನಲ್ಲಿ ಹೊಸದಾಗಿ ಖಾತೆ ತೆರೆಯುವ ಪೂರ್ವದಲ್ಲಿ ಅನುಮೋದನೆ ಪಡೆದುಕೊಳ್ಳದೇ ಕರ್ತವ್ಯಲೋಪವೆಸಗಿರುವ ಶ್ರೀ ಎಲ್..ಶ್ರೀಕಂಠಯ್ಯ, ಕಾರ್ಯಪಾಲಕ ಇಂಜನಿಯರ್(ಪ್ರಭಾರ) ಹಾಗೂ ಶ್ರೀ ಶ್ರೀಧರಮೂರ್ತಿ, ಲೆಕ್ಕಾಧಿಕ್ಷಕರು, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಕೊಡಗು ಇವರುಗಳಿಗೆ ಇನ್ನು ಮುಂದೆ ಈ ರೀತಿ ಲೋಪಗಳಿಗೆ ಅವಕಾಶ ನೀಡದಂತೆ ಕಾರ್ಯನಿರ್ವಹಿಸಲು ಆಡಳಿತಾತ್ಮಕ ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಶರಣಬಸಪ್ಪ) 2-1-2020
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು.
3. ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವೃತ್ತ, ಮೈಸೂರು
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಡಗು
5. ಶ್ರೀ ಸಿ. ಶ್ರೀಕಂಠಯ್ಯ, ಕಾರ್ಯಪಾಲಕ ಇಂಜನಿಯರ್(ಪ್ರಭಾರ), ಪಂಚಾಯತ್ ರಾಜ್ ಇಂಜನಿಯರಿಂಗ್ ಇಭಾಗ, ಕೊಡಗು
6. ಶ್ರೀ ಶ್ರೀಧರಮೂರ್ತಿ, ಲೆಕ್ಕಾಧೀಕ್ಷಕರು, ಪಂ.ರಾ.ಇಂ.ವಿಭಾಗ, ಕೊಡಗು
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
9. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.